ಈ) ಒಟ್ಟು 335 ಶಾಲೆಗಳಲ್ಲಿ ಕಲಿಕಾಯತ್ನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಜಾಯತ್ನ ಸಂಸ್ಥೆಗೆ 2005–06ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ರೂ. 25,53,677/– (ರೂ. ಇಪ್ಪತ್ತೈದು ಲಕ್ಷದ ಐವತ್ತಮೂರು ಸಾವಿರದ ಆರುನೂರ ಎಪ್ಪತ್ತೇಳು) ಗಳನ್ನು ಪಾವತಿಸಲಾಗಿದೆ.

ಉ) ಕಲಿಕಾಯತ್ನ ಕಾರ್ಯಕ್ರಮದ ಲೋಪದೋಷಗಳ ಬಗ್ಗೆ ಇಲ್ಲಿಯವರೆಗೆ ಯಾವುದೇ ದೂರು ಸರ್ವ ಶಿಕ್ಷಣ ಅಭಿಯಾನ ಕಛೇರಿಯಲ್ಲಿ ದಾಖಲಾಗಿರುವುದಿಲ್ಲ. ಹಾಗೂ 2009–10ನೇ ಸಾಲಿಗೆ ಕಲಿಕಾಯತ್ನ ಕಾರ್ಯಕ್ರಮ ಪೂರ್ಣಗೊಳ್ಳಲಿದ್ದು, 2010–11ನೇ ಸಾಲಿಗೆ ಸದರಿ ಕಾರ್ಯಕ್ರಮವನ್ನು ಮುಂದುವರೆಸುವ ಬಗ್ಗೆ ಸರ್ವ ಶಿಕ್ಷಣ ಅಭಿಯಾನದಲ್ಲಿ ಚರ್ಚಿಸಿ ಕ್ರಮ ಜರುಗಿಸಲಾಗುವುದು.

ಹುಣಸೂರಿಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣದ ಬಗ್ಗೆ

310 (706) ಶ್ರೀ ಹೆಚ್.ಪಿ.ಮಂಜುನಾಥ್ (ಹುಣಸೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಹುಣಸೂರಿಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಎಂದಿನಿಂದ ಮಂಜೂರಾಗಿರುತ್ತದೆ;

ಆ) ಸದರಿ ಕಾಲೇಜಿನಲ್ಲಿ ಕಟ್ಟಡದ ಅಭಾವದಿಂದ ಮಕ್ಕಳ ಉಪನ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ ಯಾವುದಾದರೂ ಅನುದಾನ ಮಂಜೂರಾಗಿರುವುದೇ;

ಈ) ಹಾಗಿದ್ದಲ್ಲಿ, ಮಂಜೂರಾಗಿರುವ ಅನುದಾನವೆಷ್ಟು, ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು;

ಉ) ಹಾಲಿ ಕಟ್ಟಡ ಕಟ್ಟಲು ಸ್ಥಳವಿದ್ದರೂ ಸಹ ಸರಿಯಾದ ಕಟ್ಟಡವಿಲ್ಲದೆ ಮರದ ನೆರಳಿನಲ್ಲಿ ಪಾಠ ಪ್ರವಚನಗಳು ನಡೆಯುತ್ತಿದ್ದು, ದುಸ್ಥಿತಿಯನ್ನು ಹೋಗಲಾಡಿಸಲು ಸರ್ಕಾರ ಕೈಗೊಳ್ಳಲಾಗುವ ಕ್ರಮಗಳೇನು (ವಿವರ ನೀಡುವುದು);

ಊ) ಈ ಕ್ರಮದ ಬಗ್ಗೆ ವಿವರ ನೀಡುವುದು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) 2007–08ನೇ ಸಾಲಿನಲ್ಲಿ ಮಂಜೂರಾಗಿದೆ.

ಆ) ಹೌದು.

ಇ) ಈಗ ನಿವೇಶನ ಲಭ್ಯವಾಗಿದ್ದು, ಮುಂದಿನ ಸಾಲುಗಳಲ್ಲಿ ಈ ಕಾಲೇಜಿಗೆ ಅನುದಾನ ಒದಗಿಸಲಾಗುವುದು. ಪ್ರಸ್ತುತ ಸದರಿ ಕಾಲೇಜಿಗೆ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹಣಕಾಸಿನ ಲಭ್ಯತೆಯನ್ನಾಧರಿಸಿ ಕ್ರಮ ವಹಿಸಲಾಗುವುದು.

ಊ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗೋವಿನ ತಳಿಗಳ ಸಮೀಕ್ಷೆ

313 (591) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೋವಿನ ತಳಿಗಳ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ;

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ವಿವಿಧ ಗೋ ತಳಿಗಳ ಬಗ್ಗೆ ಮಾಹಿತಿ ನೀಡುವುದು;

ಇ) ಅಧಿಕ ಹಾಲು ಹಾಗೂ ರೋಗ ನಿರೋಧಕ ತಳಿಗಳು ರೈತರಿಗೆ ಅನುಕೂಲವಾಗುವ ಬಗ್ಗೆ ಗುರುತಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಗುರುತಿಸಲಾಗಿರುವ ತಳಿಗಳಾವುವು;

ಉ) ಈ ತಳಿಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಹೌದು.

ಆ) 18ನೇ ಜಾನುವಾರು ಗಣತಿಯ ತಾತ್ಕಾಲಿಕ ವರದಿಯ ಪ್ರಕಾರ ವಿವಿಧ ಗೋ ತಳಿಗಳ ವಿವರ ಕೆಳಕಂಡಂತಿದೆ;